ನನ್ನ ಓದು



ಆರ್. ತಾರಿಣಿ ಶುಭದಾಯಿನಿ

# ಆಧುನಿಕ ಸಂವೇದನೆಯ ಸಹಜ ಕಥೆಗಳು

ಕಥೆಗಾರರಾಗಿ ನೆಲೆ ಕಂಡುಕೊಂಡಿರುವ ಚೀಮನಹಳ್ಳಿ ರಮೇಶಬಾಬು ಅವರ ಮೂರನೇ ಸಂಕಲನ 'ಮಹಾತ್ಮೆ'. ಕಥೆ ಹೇಳುವುದು ಎಂದರೆ ಸಹಜವಾಗಿ 'ಹೇಳುವುದು' ಎನ್ನುವುದು ರಮೇಶ ಬಾಬು ಶೈಲಿ. ಅವರೊಳಗೆ ಅನೇಕ ಕಥೆಗಳಿವೆ; ಅವುಗಳನ್ನು ಇನ್ನೊಬ್ಬರಿಗೆ ದಾಟಿಸಬೇಕೆಂಬ ಹಂಬಲವೇ ಇಲ್ಲಿ ಪ್ರಧಾನವಾಗುತ್ತದೆ. ಹಾಗೆಂದೇ ಅವರ ಕಥೆಗಳು ಸಹಜ ಕಥೆಗಳು. ಸಾಮಾನ್ಯವಾಗಿ ಕಥೆಗಾರನಿಗೆ ಇರಬೇಕಾದ ಪ್ರಾಥಮಿಕ ಸಂಗತಿ ಎಂದರೆ ಬದುಕಿನ ವಿವರಗಳನ್ನು ಶಕ್ತಿಶಾಲಿಯಾಗಿ ದಾಖಲಿಸುವುದು. ಇದರಿಂದ ಒಂದು ರೂಪಕ ಸೃಷ್ಟಿಯಾಗುವುದಾದರೆ ಅದು ಕಥೆಯ ಸಾಫಲ್ಯ. ಹೀಗೆ ರೂಪಕಗಳನ್ನು ಸೃಜಿಸಬಲ್ಲ ಕಥೆಗಳನ್ನು ರಮೇಶಬಾಬು ಅವರ 'ಮಹಾತ್ಮೆ' ಸಂಕಲನದಲ್ಲಿ ಕಾಣಲು ಸಾಧ್ಯವಾಗಿದೆ.

ರಮೇಶಬಾಬು ಅವರ ಕಥೆಗಳು ಬದುಕಿನ ಪ್ರಾಥಮಿಕ ಬದ್ಧತೆ ಯಾವುದೆಂದು ಧ್ಯಾನಿಸುವ ಕಥೆಗಳು. ಈ ದೊಡ್ಡ ತಾತ್ವಿಕತೆಯನ್ನು ಮುಂದಿಟ್ಟು ಕೊಂಡು ಅವರು ಕಥೆಗಳನ್ನು ಹೇಳಲು ಹೊರಡುವುದಿಲ್ಲ. ತಮ್ಮ ಎಟುಕಿನಲ್ಲಿ ಪಾತ್ರಗಳು ಸಾವು ಬದುಕುಗಳನ್ನು ಕಂಡಂತೆ ಅಲ್ಲಿ ಹೊಳೆಯುವ ಸಣ್ಣ ಮಿಂಚುಗಳೇ ತಾತ್ವಿಕತೆಗಳಾಗಿ ಕಥೆಗಳಲ್ಲಿ ಬರುತ್ತವೆ. ಇಲ್ಲಿರುವ ಹನ್ನೊಂದು ಕಥೆಗಳೂ ಒಂದಲ್ಲ ಒಂದು ರೀತಿ ಅನುಭವಗಳನ್ನು ರೂಪಕಗಳಲ್ಲಿ ಹಿಡಿದಿಡಲು ಯತ್ನಿಸುತ್ತವೆ. ಹಾಗಾಗಿ ಕಥೆಗಳು ಗಾಢವಾಗಿ ಕಾಡುವಂತಿವೆ.

ಕಥೆಗಾರರು ಇಲ್ಲಿ ಸಾವು ಬದುಕಿನ ಮೀಮಾಂಸೆಯನ್ನು ಮಾಡುವುದು ಆಧುನಿಕವಾದ ಸಂದರ್ಭಗಳಲ್ಲಿ. ಸಾವು ಎನ್ನುವುದು ಬದುಕನ್ನು ಪರೀಕ್ಷಿಸುತ್ತಿರುತ್ತದೆ. ಅದು ಬದುಕಿರುವವರಿಗೆ ಒಂದು ಬಗೆಯ ಅಪರಾಧೀಭಾವವನ್ನು ಉಂಟು ಮಾಡುತ್ತದೆ ಎನ್ನುವುದುಂಟು. ಇದನ್ನು ಕಥೆಗಾರರು ಎರಡು ತಲೆಮಾರುಗಳ ನೆಲೆಗಳಿಂದ ಶೋಧಿಸಿ ಕೊಳ್ಳುತ್ತಾರೆ. ಮಗ ಕಂಪನಿಗಳಲ್ಲಿ ಕೆಲಸ ಮಾಡುವ ತಲೆಮಾರಿನವನಾದರೆ, ಅಪ್ಪ ಹಳ್ಳಿಬದುಕಿಗೆ ಸೇರಿದ ತಲೆಮಾರು. ಇಂತಹ ದ್ವಿತ್ವಗಳಲ್ಲಿ ಸಾವು ಬದುಕುಗಳನ್ನು ನೋಡುವ ದೃಷ್ಟಿಕೋನಗಳಲ್ಲಿ ಸಹಜವಾಗಿಯೇ ಭಿನ್ನತೆಗಳಿರುತ್ತವೆ. ಮುದಿಯಾಗುತ್ತಿರುವ ತಂದೆಗೆ ಸಮಯ ಕೊಡಲಾಗದ ಕಾರ್ಪೊರೇಟ್ ಕೆಲಸದ ಒತ್ತಡ ಅನುಭವಿಸುವ ಮಗ ತಂದೆ ವೃದ್ಧಾಶ್ರಮಕ್ಕೆ ಸೇರಿಕೊಳ್ಳುವುದನ್ನು ತಪ್ಪಿಸಲು ಅಸಹಾಯಕನಾಗುತ್ತಾನೆ. ಅವನು ಅನುಭವಿಸುವ